**ಸಿ.ಸಿ. ನಂಬ್ರ: 1726/2016** **CW-1**

ದಿನಾಂಕ: 04.01.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:</u>**

ನಿಪಿ-1ರ ದೂರಿನಲ್ಲಿ ಯಾವುದೇ ಆರೋಪಿತರ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿ. ಅದಾಗಿ 1 ವಾರದ ನಂತರ ಮರು ಹೇಳಿಕೆಯನ್ನು ದಿ: 02-02-2015 ರಂದು ನೀಡಿರುತ್ತೇನೆ. ಆ ವೇಳೆಗೆ ಸಾರ್ವಜನಿಕರು ಮತ್ತು ನಮ್ಮ ಸಿಬ್ಬಂದಿಯವರು ಹೇಳಿದ ಮಾಹಿತಿಯ ಆಧಾರದ ಮೇಲೆ ಹೆಸರುಗಳನ್ನು ಹೇಳಿರುತ್ತೇನೆ. ಆ ಬಗ್ಗೆ ಮರುಹೇಳಿಕೆಯಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಸದ್ರಿ ನಮ್ಮ ವಾಹನವನ್ನು ಬಿಟ್ಟು ಕೆ ಎಸ್ ಆರ್ ಪಿ ಯ ಒಂದು ವಾಹನ ಬಂದಿರುತ್ತದೆ. ಅದು ಘಟನೆ ನಡೆದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಇತ್ತು. ಆರೋಪಿತರು ಎಸೆದ ಕಲ್ಲು ಸದ್ರಿ ವಾಹನಗಳಿಗೆ ತಾಗಿರುವುದಿಲ್ಲ.

ದಿ: 02-02-2015 ರಂದು ಆರೋಪಿತರ ಯಾವುದೇ ವಿವರಗಳನ್ನು ನನಗೆ ಮೇಲೆ ಹೇಳಿದ ವ್ಯಕ್ತಿಗಳು ನೀಡಿರಲಿಲ್ಲ ಎಂದರೆ ಸರಿಯಲ್ಲ. ಸದ್ರಿ ದಿನ ನ್ಯಾಯಾಲಯದ ಮುಂದೆ ಇರುವ ಯಾವುದೇ ಆರೋಪಿತರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ತಪ್ಪು ತಿಳುವಳಿಕೆಯಿಂದ ಆರೋಪಿತರ ಹೆಸರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ: 27-01-2015 ರಂದು ಚಾಸಾ-13 ರವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ಮತ್ತು 10 ರವರ ಸಮಕ್ಷಮ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ದಾಖಲೆಗಳನ್ನು ಠಾಣೆಯಲ್ಲಿ ಸೃಷ್ಟಿಸಿ ಎಲ್ಲರೂ ಅಲ್ಲೇ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳುವಂತೆ ದಿ: 25-01-2015 ರಂದು ಘಟನಾ ಸ್ಥಳದಲ್ಲಿ ಯಾವುದೇ ಗುಂಪು ಘರ್ಷಣೆ ಆಗಿ ಗಲಾಟೆ ನಡೆದು ನಮ್ಮ ಇಲಾಖೆಯವರಿಗೆ ಹಲ್ಲೆ ನಡೆದಿಲ್ಲ ಎಂದರೆ ಸರಿಯಲ್ಲ. ಘಟನೆಯಿಂದ ಯಾರಿಗೂ ಪೆಟ್ಟಾಗಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಮೊಬೈಲ್ ಚಿತ್ರೀಕರಣ ಆದ ಬಗ್ಗೆ ಘಟನೆ ನಡೆಯದೆ ಇಲ್ಲದೆ ಗುಂಪು ಘರ್ಷಣೆಯನ್ನು ತಡೆಯಲು ಹೋದ ನನಗೆ ಯಾವುದೇ ಹಲ್ಲೆ ನಡೆದ ಸಂಗತಿ ನಡೆದಿಲ್ಲ ಎಂದರೆ ಸರಿಯಲ್ಲ. ಮಹಿಳೆ ಮತ್ತು ಮಕ್ಕಳಿಗೆ ರಸ್ತೆಯಲ್ಲಿ ತೊಂದರೆಯಾಗುತ್ತಿದೆ ಎಂಬ ಬಗ್ಗೆ ಯಾವುದೇ ಸಾರ್ವಜನಿಕರು ದೂರು ನೀಡಿರಲಿಲ್ಲ ಎಂದರೆ ಸಾಕ್ಷಿಯು ಆ ಹಿನ್ನೆಲೆಯಲ್ಲಿ ಎರಡೂ

ಪ್ರಕರಣಗಳೂ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಗುಂಪನ್ನು ಚದುರಿಸಲು ಗಾಳಿಯಲ್ಲಿ ಯಾವುದೇ ರಬ್ಬರ್ ಬುಲೆಟನ್ನು ಚದುರಿಸಿದ ಸಂಗತಿ ನಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸುವ ದುರುಉದ್ದೇಶದಿಂದ ನಾನು ಮತ್ತು ಸಿಬ್ಬಂದಿಯವರು ಆಸ್ಪತ್ರೆಯಲ್ಲಿ ದಾಖಲಾಗಿ ಗಾಯದ ಪ್ರಮಾಣ ಪತ್ರಗಳನ್ನು ಪಡೆದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಮೇಲೆ ಹೇಳಿದ ಘಟನೆಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ